## ಇರುವ ಹೂವು ದಾರದಲ್ಲೇ ಕಟ್ಟಿದ ಹಾರ

# ದಿನಕ್ಕೊಂದು ಕಿವಿಮಾತು

**‘ಶುಭೋದಯ’ ಎಂದು ಮಾತು ಆರಂಭಿಸುವ ರಂಗಸ್ವಾಮಿ ದಿನಕ್ಕೊಂದು ಸ್ಫೂರ್ತಿದಾಯಕ ಪುಟ್ಟ ಕಥೆಯನ್ನು ನೀಡುತ್ತಿದ್ದಾರೆ. ಇದುವರೆಗೆ ಸಾವಿರಾರು ಶುಭ ಆಕಾಂಕ್ಷೆಗಳನ್ನು ರೀಲ್ಸ್ ಮೂಲಕ ವ್ಯಕ್ತಪಡಿಸಿದ್ದಾರೆ.**

■ ನಿರೂಪಣೆ: **ರಾಘು**



ರಂಗಸ್ವಾಮಿ ಮೂಕನಹಳ್ಳಿ

ರೀಲ್ಸ್ ಮತ್ತು ಶಾರ್ಟ್ಸ್ ಬಗ್ಗೆ ಸಾಮಾನ್ಯವಾಗಿ ಋಣಾತ್ಮಕ ಮಾತುಗಳೇ ಹೆಚ್ಚಿವೆ. ಅದನ್ನು ಜನಪ್ರಿಯತೆಯ ಅಗ್ಗದ ಮಾರ್ಗ, ಹಿಂಬಾಲಕರ ಪಟ್ಟಿ ಬೆಳೆಸುವ ತಂತ್ರ ಎಂದು ಹೀಯಾಳಿಸುತ್ತಾರೆ. ಅದನ್ನು ನೋಡುವುದು – ಮಾಡುವುದು ಸಮಯ ವ್ಯರ್ಥ ಎಂದು ಅನೇಕರು ಹೇಳುವುದನ್ನು ಕೇಳಿದ್ದೇನೆ. ನಿಜಕ್ಕೂ ‘ರೀಲ್ಸ್’ ಶಕ್ತಿಶಾಲಿ ಮಾಧ್ಯಮ. ಅದರಲ್ಲಿ ಪ್ರಕಟವಾಗುವ ಪೋಸ್ಟ್ ವೇಗವಾಗಿ ಜಗತ್ತಿನಾದ್ಯಂತ ಪ್ರಸಾರ ಆಗುತ್ತದೆ. ಆ ಗುಣಾತ್ಮಕ ಅಂಶವನ್ನು ಸಮರ್ಪಕವಾಗಿ ಬಳಸಬೇಕು ಎನ್ನುವ ಚಿಂತನೆಯಿಂದ ‘ದಿನಕ್ಕೊಂದು ಕಿವಿಮಾತು’ ಮೊಳಕೆ ಒಡೆಯಿತು.

‘ದಿನಕ್ಕೊಂದು ಕಿವಿಮಾತು’ ದೀರ್ಘವಾದ ಪಯಣ. ನಾಲ್ಕು ವರ್ಷಗಳಿಂದ ಒಂದು ದಿನವೂ ಬಿಡದೆ ರೀಲ್ಸ್ ಮಾಡುತ್ತಿದ್ದೇನೆ. ಜಗತ್ತಿನ ಯಾವುದೇ ಮೂಲೆಯಲ್ಲಿ ಇದ್ದರೂ ಭಾರತೀಯ ಕಾಲಮಾನಕ್ಕೆ ಅನುಗುಣವಾಗಿ ಬೆಳಿಗ್ಗೆ 6ರ ಹೊತ್ತಿಗೆ ಪ್ರಕಟಿಸುತ್ತೇನೆ. ಸುಮಾರು 180 ಕಿವಿಮಾತುಗಳನ್ನು ವಿದೇಶದಲ್ಲಿ ಮಾಡಿದ್ದೇನೆ. ಈ ಕಾರ್ಯ ಶುರು ಮಾಡುವ ಹೊತ್ತಿಗೆ ಇಷ್ಟು ದೀರ್ಘಕಾಲ ಬರುತ್ತದೆ ಎಂದು ನಿರೀಕ್ಷೆ ಮಾಡಿರಲಿಲ್ಲ. ಇನ್ನು ಎಷ್ಟು ದಿನ ಸಾಗುತ್ತೋ ಗೊತ್ತಿಲ್ಲ. ದೊಡ್ಡ ಭಾಷಣಕ್ಕಿಂತ ಪುಟ್ಟ ಪುಟ್ಟ ಕಥೆಗಳನ್ನು ಕಟ್ಟಲು ಸಿದ್ಧತೆ ಬೇಕಾಗುತ್ತದೆ.

ಮೂವತ್ತು ಸೆಕೆಂಡ್ ಒಳಗೆ ಮನಸಿಗೆ ಹಿತ ನೀಡುವ ಸಂಗತಿಯನ್ನು ಸರಳವಾಗಿ ನಿರೂಪಿಸಿ, ಶುಭ ಕೋರುವುದು ನನ್ನ ರೀಲ್ಸ್ ಉದ್ದೇಶ. ದೀರ್ಘ ಭಾಷಣದ ವಿಷಯ ವಸ್ತುವಿಗಿಂತ ಚುಟುಕು ರೀಲ್ಸ್ ಚುರುಕಾಗಿ ಮುಟ್ಟುತ್ತದೆ. ಇದಕ್ಕೆ ‘ಪ್ರಜಾವಾಣಿ’ ಸುಭಾಷಿತಗಳೂ ಸಹಕಾರಿ. ಇದರಲ್ಲಿ ನನ್ನದ್ದೇನೂ ಇಲ್ಲ, ಅನೇಕ ಮಹನೀಯರ ಅನುಭವದ ಸಾರವನ್ನೇ ಮರು ವ್ಯಾಖ್ಯಾನ ಮಾಡುತ್ತಿದ್ದೇನೆ. ಭಗವಂತನ ಸೃಷ್ಟಿಯಲ್ಲಿ ದಾರವೂ ಇದೆ; ಹೂವೂ ಇದೆ. ಅದನ್ನೇ ಬಳಸಿ ಹಾರವನ್ನು ಕಟ್ಟುವ ಕೆಲಸ ಮಾಡಿದ್ದೇನೆ ಎಂದು ಭಾವಿಸಿದ್ದೇನೆ. ನಾಳೆ ಏನು ಹೇಳಬೇಕು ಎನ್ನುವ ಬಗ್ಗೆ ಹಿಂದಿನ ದಿನವೇ ತಾಲೀಮು ಮಾಡಿಕೊಳ್ಳುತ್ತೇನೆ. ಒಮ್ಮೆಯೂ ಹಳೆಯ ಪೋಸ್ಟ್ ಹಾಕಿಲ್ಲ. ಪ್ರತಿದಿನ ಬೆಳಿಗ್ಗೆ ಚಿತ್ರೀಕರಣ ಮಾಡುತ್ತೇನೆ. ಯಾವುದೋ ಸಮಯದಲ್ಲಿ ಚಿತ್ರೀಕರಿಸಿ ‘ಶುಭೋದಯ’ ಎಂದು ಹೇಳುವ ಆಭಾಸ ಯಾವತ್ತೂ ಮಾಡುವುದಿಲ್ಲ.

ಓದಿದ್ದು, ಕೇಳಿದ್ದು, ನೋಡಿದ ಸಂದರ್ಭದಲ್ಲಿ ಹೊಳೆದ ಯೋಚನೆಯನ್ನೇ ಬರೆದಿಟ್ಟುಕೊಂಡಿರುತ್ತೇನೆ. ಅದನ್ನು ರೀಲ್ಸ್‌ಗೆ ಸೂಕ್ತ ಆಗುವಂತೆ ಎಡಿಟ್ ಮಾಡುವುದು ರೂಢಿ. ಕೆಲವು ಬಾರಿ ಪುನರ್ ಚಿತ್ರೀಕರಣ ಮಾಡಿದ್ದೂ ಇದೆ. ಮೊದಲೆಲ್ಲ ಇದು ಒಂದು ಕೆಲಸ ಎಂದು ಅನ್ನಿಸುತ್ತಿತ್ತು. ಈಗ ಬದುಕಿನ ಒಂದು ಭಾಗ ಎನ್ನುವ ಅನುಭವ ನೀಡುತ್ತಿದೆ. ಸ್ಫೂರ್ತಿಯ ಜೊತೆ ವಿವೇಕದ ಮಾತುಗಳನ್ನು ನನ್ನ ಕಥೆಗಳು ನಿರೂಪಿಸುತ್ತವೆ ಎನ್ನುವ ಪ್ರತಿಕ್ರಿಯೆ ಕೇಳಿದ್ದೇನೆ. ವಿದೇಶಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಆಯಾ ದೇಶದ ವಿಷಯವನ್ನೂ ಆಯ್ಕೆ ಮಾಡಿಕೊಳ್ಳುತ್ತೇನೆ. ಅಲ್ಲಿನ ಗಾದೆ ಮಾತುಗಳನ್ನು ಕೆಲವೊಮ್ಮೆ ಬಳಸಿದ್ದೇನೆ. ಹಣಕಾಸಿನ ವಿಷಯದಲ್ಲಿ ‘ಉಳಿಕೆ ಮೊದಲು ಖರ್ಚು ನಂತರ’ ಎನ್ನುವ ನಿಯಮ ನನ್ನದು. ಮೂವತ್ತು ವರ್ಷಗಳಿಂದ ಆ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವುದರಿಂದ ಗಳಿಕೆಯ ಸಂಗತಿಗಳೂ ಸಹಜವಾಗಿ ‘ದಿನಕ್ಕೊಂದು ಕಿವಿಮಾತು’ನಲ್ಲಿ ಬರುತ್ತವೆ.

### ಹೆಸರೇ ‘ಶುಭೋದಯ’

ರೀಲ್ಸ್ ಮೂಲಕ ಎಲ್ಲೆಲ್ಲಿ ತಲುಪಿದ್ದೇನೆ ಎನ್ನುವುದು ಗೊತ್ತಿರುವುದಿಲ್ಲ. ಅನೇಕರು ತಮ್ಮ ವಾಟ್ಸ್‌ಆ್ಯಪ್ ಸ್ಟೇಟಸ್‌ನಲ್ಲಿ ‘ದಿನಕ್ಕೊಂದು ಕಿವಿಮಾತು’ ಹಾಕಿಕೊಳ್ಳುತ್ತಾರೆ. ಅದನ್ನೇನಾದರೂ ನೋಡಿದರೆ ಖುಷಿ ಆಗುತ್ತದೆ. ಒಮ್ಮೆ ಮೈಸೂರಿನಲ್ಲಿ ನಮ್ಮ ಮನೆಯ ಸಮೀಪದಲ್ಲಿ ಒಬ್ಬ ಹುಡುಗಿ ಬೆಳಿಗ್ಗೆ ಸೈಕಲ್ ಓಡಿಸುತ್ತಿದ್ದಳು. ನನ್ನನ್ನು ನೋಡಿ ‘ಶುಭೋದಯ ಅಂಕಲ್’ ಎಂದಳು. ನಾನು ‘ಶುಭೋದಯ’ ಹೇಳಿ ಮುನ್ನಡೆದೆ. ನಂತರ ‘ಶುಭೋದಯ ಅಂಕಲ್’ ಎಂದು ಜೋರಾಗಿ ಕೂಗಿ ಅವರ ತಂದೆಗೆ ತೋರಿಸಿದಳು. ಅವಳು ಯಾರು ಎನ್ನುವುದು ಗೊತ್ತಿಲ್ಲ. ನನ್ನ ಹೆಸರೇ ‘ಶುಭೋದಯ’ ಎಂದು ತಿಳಿದುಕೊಂಡಿದ್ದಳು. ಅಷ್ಟರಲ್ಲಿ ಅವರ ತಂದೆ ರೀಲ್ಸ್ ಮಹಿಮೆಯನ್ನು ವಿವರಿಸಿದರು.

ದೇವಸ್ಥಾನಕ್ಕೆ ಹೋದ ವೇಳೆ ಅಜ್ಜಿ ‘ಶುಭೋದಯ ಸರ್’ ಎಂದರು. ನಿತ್ಯ ನಿಮ್ಮ ‘ಶುಭೋದಯ’ ನೋಡುತ್ತೇನೆ ಅಂದರು. ಅವರಿಗೆ ಅದು ‘ದಿನಕ್ಕೊಂದು ಕಿವಿಮಾತು’ ಎಂದು ಗೊತ್ತಿಲ್ಲ. ಮೈಸೂರಿನಲ್ಲಿ ಸಾಕಷ್ಟು ಪೊಲೀಸ್ ಸಿಬ್ಬಂದಿ ನೋಡುತ್ತಾರೆ. ಕೆಲವರು ನಿಮ್ಮ ‘ಶುಭೋದಯ’ ನೋಡದೆ ದಿನ ಆರಂಭ ಆಗುವುದಿಲ್ಲ ಎಂದು ಹೇಳುತ್ತಾರೆ. ಇದೆಲ್ಲ ಸಾರ್ಥಕ ಭಾವವನ್ನು ಮೂಡಿಸುತ್ತದೆ. ಇದೇ ಹೊಸ ಕಥೆಗಳನ್ನು ಕಟ್ಟಲು ಹುರಿದುಂಬಿಸುತ್ತದೆ. ■